# ಬಾಡಿಗೆಗೆ ಮನೆ ಇದೆ!



■ ವೇದಾವತಿ ಹೆಚ್.ಎಸ್.

ಅದೊಂದು ದಿನ ಸಂಜೆಯ ಸಮಯದಲ್ಲಿ ಮನೆಯ ಹತ್ತಿರದಲ್ಲಿದ್ದ ಪಾರ್ಕಿನಲ್ಲಿ ವಾಯುವಿಹಾರ ಮುಗಿಸಿಕೊಂಡು ವಾಪಸ್ ಮನೆಯ ಕಡೆಗೆ ಹೆಜ್ಜೆ ಹಾಕುತ್ತಿರುವಾಗ ಮಹಿಳೆಯೊಬ್ಬರು ಜೋರಾಗಿ ಮಾತನಾಡುತ್ತಿರುವುದು ನನ್ನ ಕಿವಿಗೆ ಅಪ್ಪಳಿಸಿತು. ಸಾಧಾರಣವಾಗಿ ನಾನು ಬೇರೆ ವಿಷಯಗಳ ಕಡೆಗೆ ಗಮನಹರಿಸುವುದು ಬಹಳ ಕಡಿಮೆ. ನಾನಾಯಿತು ನನ್ನ ಕೆಲಸವಾಯಿತು ಎಂಬಂತೆ ಇರುತ್ತೇನೆ. ಯಾರಾದರೂ ನನ್ನಲ್ಲಿ ನೋವು, ನಲಿವು ಹಂಚಿಕೊಂಡರೆ ಅವರಿಗೆ ನನ್ನಿಂದ ಏನಾದರೂ ಉಪಯೋಗವಾಗುವಂತಹ ಮಾಹಿತಿ ಇದ್ದರೆ ಮಾತ್ರ ತಿಳಿ ಹೇಳುತ್ತೇನೆ. ಇನ್ನೊಬ್ಬರ ವಿಷಯದಲ್ಲಿ ಮೂಗು ತೂರಿಸಲು ಎಂದೂ ಹೋಗುವುದಿಲ್ಲ.

ಆದರೂ ಅಂದು ಯಾರೊಂದಿಗೋ ಮಾತನಾಡುತ್ತಿದ್ದ ಆ ಮಹಿಳೆಯ ಧ್ವನಿ ಬಹಳ ಕರ್ಕಶವಾಗಿದ್ದರಿಂದ ಏನಿರಬಹುದೆಂದುಕೊಂಡು ಅವಳ ಮನೆಯಿಂದ ಹತ್ತು ಹೆಜ್ಜೆ ಮುಂದೆ ಹೋದವಳು ಕುತೂಹಲವನ್ನು ತಡೆಯಲಾರದೆ ಹಿಂದಕ್ಕೆ ಬಂದು ಅವರ ಮನೆಯ ಗೇಟಿನ ಬಳಿಯಲ್ಲಿ ನಿಂತೆ. ಗೇಟಿನ ಮುಂಭಾಗದಲ್ಲಿ 'ಮನೆ ಬಾಡಿಗೆಗೆ ಇದೆ' ಎಂಬ ನಾಮಫಲಕವನ್ನು ಓದಿದೆ. 'ಓಹೋ, ಇಲ್ಲೊಂದು ಮನೆ ಖಾಲಿಯಿದೆ' ಎಂದು ಮನಸ್ಸಿನಲ್ಲೇ ಅಂದುಕೊಂಡೆ. ಬೇರೊಬ್ಬರೊಂದಿಗೆ ಮನೆ ಬಾಗಿಲಿನಲ್ಲಿ ನಿಂತು ಮಾತನಾಡುತ್ತಿರುವ ಆ ಮಹಿಳೆಯೇ ಮನೆಯ ಒಡತಿ ಇರಬಹುದೆಂದುಕೊಂಡೆ. ಅವಳಲ್ಲಿ ಮನೆ ಬಾಡಿಗೆ ಎಷ್ಟೆಂದು ಕೇಳೋಣ ಎಂದುಕೊಂಡು ಗೇಟಿನ ಬಳಿಯಲ್ಲಿ ನಿಂತುಕೊಂಡೆ.

ಬೆಂಗಳೂರಿನಲ್ಲಿ ವಾಸಿಸಲು ಮನೆಯನ್ನು ಬಾಡಿಗೆಗೆ ಹುಡುಕುವುದು, ಅದರಲ್ಲೂ ಬಾಡಿಗೆದಾರನಿಗೆ ಸರಿ ಹೊಂದುವ ಮನೆ ಸಿಗುವುದು ಅಷ್ಟು ಸುಲಭವಾದ ಮಾತಲ್ಲ. ಬಾಡಿಗೆಗೆ ಹೋಗುವ ಮನೆಗಳು ಎಲ್ಲಾ ರೀತಿಯಲ್ಲೂ ತೃಪ್ತಿ ತರದಿದ್ದರೂ ಕೂಡ ಆಫೀಸು, ಮಕ್ಕಳ ಶಾಲೆಗೆ ಹತ್ತಿರದಲ್ಲಿ ಇರುವಂತಹ ಮನೆಗಳನ್ನೇ ಹುಡುಕುವುದು ಬಾಡಿಗೆದಾರನಿಗೆ ಅನಿವಾರ್ಯವೂ ಆಗಿರುತ್ತದೆ. ಯಾವುದೇ ಮನೆಗಳಿಗೆ ಹೋದರು ಮಾಲೀಕರ ಭಾವನೆಗಳಿಗೆ ತಕ್ಕಂತೆ ಕಟ್ಟಿಸಿರುತ್ತಾರೆ. ಆ ಮನೆಗಳು ಬಾಡಿಗೆದಾರನು ವಾಸಿಸುವವರೆಗೆ ಮಾತ್ರ ಅವನದಾಗಿರುತ್ತದೆ. ಕೆಲವೊಮ್ಮೆ ಮನೆ ಹೊಂದಿಕೆಯಾದರೂ ಮನೆಯ ಮಾಲೀಕರು ಬಾಡಿಗೆದಾರನಿಗೆ ಹೊಂದಿಕೆಯಾಗುವುದು ಕಷ್ಟಕರವಾದ ವಿಷಯ. ಅದರೂ ಬದುಕು ನಡೆಸಲು ಒಂದು ಸೂರು ಇರಬೇಕಲ್ಲವೇ?.

ಪರಿಚಯಸ್ಥರೊಬ್ಬರು ನನ್ನಲ್ಲಿ ಬಾಡಿಗೆಗೆ ಮನೆಯನ್ನು ಹುಡುಕುತ್ತಿರುವ ವಿಷಯ ತಿಳಿಸಿದ್ದರು. ಇಲ್ಲಿರುವ ಮನೆ ಬಾಡಿಗೆಗೆ ಇರುವುದನ್ನು ಅವರಿಗೆ ಹೇಳಿದರಾಯಿತೆಂದುಕೊಂಡು 'ನಿಮ್ಮ ಮನೆಗೆ ತಿಂಗಳ ಬಾಡಿಗೆ ಎಷ್ಟೆಂದು ತಿಳಿದುಕೊಳ್ಳಬಹುದೇ?' ಎಂದು ಆ ಮನೆಯ ಒಡತಿಯಲ್ಲಿ ಕೇಳಿದೆ. ಅದಕ್ಕವಳು ಜೋರಾದ ಧ್ವನಿಯಲ್ಲಿ ನನ್ನ ಮುಖಕ್ಕೆ ಹೊಡೆದಂತೆ 'ನಾನೇನು ಇಲ್ಲಿ ತರಕಾರಿ ವ್ಯಾಪಾರ ಮಾಡುತ್ತಿಲ್ಲ. ರಸ್ತೆಯಲ್ಲಿ ನಿಂತು ಮನೆ ಬಾಡಿಗೆ ಎಷ್ಟೆಂದು ಕೇಳಿದರೆ ಹೇಗೆ?. ಗೇಟನ್ನು ತೆಗೆದು ಒಳಗೆ ಬಂದು ಮನೆಯನ್ನು ಒಮ್ಮೆ ನೋಡಿ. ನಿಮಗೆ ಒಪ್ಪಿಗೆಯಾದರೆ ಬಾಡಿಗೆ ಎಷ್ಟೆಂದು ಹೇಳುತ್ತೇನೆ' ಎಂದಾಗ ಅವಳ ಜೋರಾದ ಧ್ವನಿಗೆ ನಾನೊಮ್ಮೆ ತಬ್ಬಿಬ್ಬಾಗಿ ಹೋದೆ.

ಇದುವರೆಗೂ ನಾನು ಯಾರಲ್ಲೂ ಅಂತಹ ಖಡಕ್ ನುಡಿಗಳನ್ನು ಕೇಳಿದವಳಲ್ಲ. ಅವಳ ಮಾತುಗಳು ನನ್ನ ಮೃದು ಮನಸ್ಸಿಗೆ ಆ ಗಳಿಗೆಯಲ್ಲಿ ನೋವಾಗಿದ್ದಂತು ನಿಜ. ಆದರೂ ಸುಧಾರಿಸಿಕೊಂಡು ಗೇಟ್‌ನ್ನು ಮುಂದಕ್ಕೆ ತಳ್ಳಿಕೊಂಡು ಮನೆಯ ಬಾಗಿಲ ಬಳಿ ಹೋಗಿ ಅವಳ ಎದುರಿನಲ್ಲಿ ನಿಂತು ಮಾತನಾಡಲು ಪ್ರಾರಂಭಿಸಿದೆ.

'ಅಲ್ಲ ಮೇಡಂ, ನಿಮ್ಮ ಕಂಠ ಕಂಚಿನ ಕಂಠವೇ ಇರಬೇಕು!. ಎಷ್ಟೊಂದು ಜೋರಾಗಿ ಮಾತನಾಡುತ್ತೀರಿ?. ನನ್ನ ಪಾಡಿಗೆ ನಾನು ವಾಕಿಂಗ್ ಮುಗಿಸಿ ಮನೆ ಕಡೆಗೆ ತೆರಳುತ್ತಿದ್ದೆ. ನಿಮ್ಮ ಕಂಠ ಸಿರಿಯನ್ನು ಕೇಳಿ ಮುಂದೆ ಇಟ್ಟ ಹೆಜ್ಜೆಯನ್ನು ಹಿಂದಕ್ಕೆ ಇಡುವಂತೆ ಮಾಡಿತು. ಈಗ ನಿಮ್ಮ ಈ ಸುಂದರವಾದ ಮನೆಗೆ ಬಾಡಿಗೆ ಎಷ್ಟು ಎಂಬುದನ್ನು ಹೇಳಿದರೆ ನನ್ನ ಪರಿಚಯಸ್ಥರೊಬ್ಬರಿಗೆ ನಿಮ್ಮ ಮನೆಯ ಬಗ್ಗೆ ತಿಳಿಸುತ್ತೇನೆ. ನಾನು ಕೂಡ ಇದೇ ಏರಿಯಾದಲ್ಲಿ ವಾಸ ಮಾಡುತ್ತಿದ್ದೇನೆ. ನನಗೆ ಬಾಡಿಗೆಗೆ ಮನೆ ಅಗತ್ಯವಿಲ್ಲ. ಆದರೆ ನನ್ನ ಆತ್ಮೀಯ ಗೆಳತಿಯೊಬ್ಬರು ಇದೇ ಏರಿಯಾದಲ್ಲಿ ಬಾಡಿಗೆಗೆ ಮನೆಯನ್ನು ಹುಡುಕುತ್ತಿರುವುದಾಗಿ ಹೇಳಿದ್ದರು. ಅದಕ್ಕಾಗಿ ನಿಮ್ಮಲ್ಲಿ ಕೇಳಿದೆ' ಎಂದಾಗ ಆ ಮಹಿಳೆ ಅವಳ ಮನೆಯ ಬಗ್ಗೆ ಗುಣಗಾನ ಮಾಡಲು ಪ್ರಾರಂಭಿಸಿದಳು.

ಅವಳು ಮಾತು ಮುಗಿಸುವಂತೆ ಕಾಣದಿದ್ದಾಗ 'ಮೇಡಂ, ಬಾಡಿಗೆ ಎಷ್ಟು ತಿಳಿಸಿದರೆ ನಾನು ನನ್ನ ಗೆಳತಿಗೆ ನಿಮ್ಮ ಮನೆ ಬಗ್ಗೆ ಹೇಳಬಹುದು' ಎಂದು ಅವಳು ನನ್ನಲ್ಲಿ ಅಗತ್ಯವಿಲ್ಲದ ವಿಷಯಗಳ ಬಗ್ಗೆ ಮಾತನಾಡುವುದನ್ನು ತಪ್ಪಿಸಿಕೊಳ್ಳಲು ಅಲ್ಲಿಂದ ಹೊರಡಲು ಸಿದ್ಧಳಾದೆ. ■





ದೊಡ್ಡದೊಡ್ಡ ಗ್ರಾಮಗಳು ಮತ್ತು ಸಣ್ಣ ನಗರಗಳಲ್ಲಿ ಇತ್ತೀಚಿನ ದಿನಗಳಲ್ಲಿ ನಡೆಯುವ 'ಲಿವ್ ಇನ್ ರಿಲೇಶನ್' ಮತ್ತು 'ಲೆಟ್ ಟುಗೆದರ್' ಸಂಬಂಧಗಳ ಸುತ್ತ ಹೆಣೆದಿರುವ ಈ ಧಾರಾವಾಹಿಯಲ್ಲಿ, ಬಹು ಸೂಕ್ಷ್ಮ ವಿಚಾರಗಳನ್ನು ಹಿಂದಿ ಲೇಖಕಿ **ಶರದ್ ಸಿಂಗ್** ಕಟ್ಟಿಕೊಟ್ಟಿದ್ದಾರೆ. 'ಸುಧಾ' ಓದುಗರಿಗೆ ಚಿರಪರಿಚಿತರಾದ ಹಿರಿಯ ಲೇಖಕ **ಡಿ.ಎನ್. ಶ್ರೀನಾಥ್** ಅವರು ಈ ಧಾರಾವಾಹಿಯನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಓದುಗರನ್ನು ಮತ್ತೊಂದು ಹೊಸ ಭಾವನಾತ್ಮಕ ಲೋಕಕ್ಕೆ ಕರೆದೊಯ್ಯಲು 'ಸುಧಾ' ಸಜ್ಜಾಗಿದೆ.

ಮುಂದಿನವಾರದಿಂದ ನಿರೀಕ್ಷಿಸಿ...